ಅಬ್ಬರಗಳಿಲ್ಲದೆ ಹರಿಯುವ ಸೇತುವೆ ಕೆಳಗಿನ ನದಿಯಂತಹ ವಯಸ್ಸು. ಅಂಥದರಲ್ಲಿ ಇವಳನ್ನು ಓಡಿಸಿಕೊಂಡು ಬಂದದ್ದೇಕೆ? ಬಿಡು, ಇವಳೇನು ಹುಡುಗಿಯೇ ಅವಳಿಗೂ ಮೂವತ್ತೈದು.

ಆದರೆ, ಹೆಂಗಸು ನಿಜವಾಗಿಯೂ ಓಡಿಹೋಗಲು ಬಯಸುವ ಕಾಲವೇ ಮೂವತ್ತೈದು ಎಂಬ ಸತ್ಯ ಆ ಕ್ಷಣಕ್ಕೆ ಅವನಿಗೆ ಹೊಳೆದಂತಾಗಿ ಫಕ್ಕನೆ ರೋಮಾಂಚನಗೊಂಡ. ಹೌದು ಮತ್ತೆ, ಮದುವೆಯ ಸಡಗರ ಮಕ್ಕಳಲ್ಲಿ ಮುಗಿದು, ಮಕ್ಕಳ ಸೌಭಾಗ್ಯ ಚಾಕರಿಯಲ್ಲಿ ಮುಗಿದು, ಸೌಂದರ್ಯವೆಲ್ಲ ಸೊಂಟದ ಮಡತೆಗಳಲ್ಲಿ ಮುಗಿದು, ಯಾವುದೋ ದವಡೆಯ ಮೂಲೆಯಲ್ಲಿ ಹಲ್ಲುನೋವು ಕದಲುವ ಹೊತ್ತಿಗೆ ಮೂವತ್ತೈದಾಗಿರುತ್ತದೆ. ಕಾಡುವ ಅತ್ತೆ ಸತ್ತು ಹೋಗಿ, ಗಂಡನ ಕಾಮ ಬತ್ತಿಹೋಗಿ, ಪ್ರೀತಿಯ ಜಾಗದಲ್ಲಿ ಮಿಡಿನಾಗರವೊಂದು ನಿಗುರುವ ಹೊತ್ತಿಗೆ, ಪಕ್ಕದ ಮನೆಯವನ ಕಣ್ಣಲ್ಲಿ ಕಾಮ, ಅಂತಃಕರಣ, ಅಯ್ಯೋಪಾಪಗಳು ಗುರುತೇ ಸಿಗದಂತೆ ತಳಿಕೆ ಹಾಕಿಕೊಂಡು ಬೆನ್ನತ್ತಿದರೆ ಥೂ ಬದುಕೇ ನೀನಿಲ್ಲಿಗೆ ಮುಗಿದು ಹೋಗು ಎಂದು ಚೀರಬೇಕೆನಿಸುತ್ತದೆ. ಆದರೆ ನಿದ್ದೆಯ ಮಾಯದಲ್ಲಿ ಸುಮ್ಮನೇ ನಗುವ ಮಗಳು 'ಮಮ್ಮೀ' ಎಂದು ಕನವರಿಸಿ ಸೆರಗಿನೊಳಗಿನ 'ಅಣ್ಣಿ' ತಾಕಿದಾಗ ಸಾಯಲು ಮನಸ್ಸಾಗದೆ ನಿಡುಸುಯ್ಯುತ್ತಾಳೆ. ಓಡಿಹೋಗಬೇಕೆಂಬ ಆಸೆ ಹೊಕ್ಕಳದಾಳದಿಂದ ನೆತ್ತಿಗೇರುವುದೇ ಅಂಥ ನಿರ್ನಿದ್ರೆಯ ರಾತ್ರಿಗಳಲ್ಲಿ. ಆಗ ವಯಸ್ಸಿಗೆ ಮೂವತ್ತೈದು!

'ಹಾಗಾದರೆ ಅಮ್ಮನ ಮನೆಗೇಕೆ ಹೋಗಲಿಲ್ಲ?' ಆತ ಕೇಳಿದ.

ಮೂರ್ಖ ಎಂಬಂತೆ ನಕ್ಕಳು. ಅಮ್ಮನಿಗೂ ವಯಸ್ಸಾಗಿದೆ. ಎಷ್ಟು ದಿನಾ ಅಂತ ಅಮ್ಮನ ಪಾತ್ರ ಮಾಡಿಯಾಳು. ಸಾಕು ಸಾಕು. ನನಗೆ ಬೇಕಾದ್ದು ನೀನು. ನಿನ್ನ ಮಡಿಲು. ನಿನ್ನೆದುರು ನಾನು ಮೈತುಂಬ ಹೊದ್ದರೂ ಬೆತ್ತಲೆಯೇ. ನೋಡು, ಈ ಶಿಥಿಲಗಳ ಮೇಲಾಣೆ... ನಿನ್ನ ಕೈಗೆ ಸಿಕ್ಕಿದ್ದೇನೆ. ಬೇಕಾದ್ದು ಮಾಡು, ಪ್ರೀತಿಸು, ಹಾಡು, ನನ್ನ ಮೈತುಂಬ ಕವಿತೆ ಬರಿ. ಗೋಡೆಗೆ ಮೆತ್ತಿ ಚಿತ್ರವಾಗಿಸು, ಉಗುರಲ್ಲಿ, ಬಗೆದು ನನ್ನಲ್ಲೊಂದು ದೊಗರು ಮಾಡು. ಬಡಿ, ಕೊಲ್ಲು... ಆದರೆ ಮಿತ್ರಾ, ಮನೆಗೆ ಕಳಿಸುವ ಮುನ್ನ ನನ್ನೆದೆಯಲ್ಲೊಂದು ಕನಸು ಹುಟ್ಟಿಸು. ಒಂದು ಹಾಡು ಚಿಗುರಿಸು. ನನ್ನೆಲ್ಲ ದುರಂತಮಯ ರಾತ್ರಿಗಳನ್ನು ನಿನ್ನ ನೆನಪಿನಾಸರೆಯಿಂದ ನಿರಾತಂಕವಾಗಿ ಕಳೆದುಬಿಡುವಷ್ಟು ಮಾತ್ರದ ಧೈರ್ಯವನ್ನು ಬಟ್ಟಲೊಂದರಲ್ಲಿ ಎತ್ತಿಕೊಡು. ಅಷ್ಟು ಸಾಕು ಎಂಬಂತೆ ಅವನತ್ತ ನೋಡಿದಳು. ಅವನೊಂದು ಹಾಡು ಮೀಟುತ್ತಿದ್ದ.

ಮಧ್ಯಾಹ್ನದ ಹೊತ್ತಿಗೆ ಅವರು ಮತ್ತೆ ಊರೊಳಕ್ಕೆ ಬಂದರು. ನಿಗಿ ನಿಗಿ ಬಿಸಿಲಿನಲ್ಲಿ ನಿರ್ಲಜ್ಜ ರಸ್ತೆಗಳು ಬೆವರುತ್ತ ಅಂಗಾತ ಮಲಗಿದ್ದವು. ಬಂಗಲೆಗಳಲ್ಲಿ ಶ್ರೀಮಂತರೂ ಹೀಗೇ ಮಲಗಿರಬೇಕು ಅಂದುಕೊಂಡರು. ಅವಳ ಪಲ್ಲೂ ಈಗ ಇಬ್ಬರ ತಲೆಯ ಮೇಲೂ ಹರಡಿಕೊಂಡಿತ್ತು. ಬೆವೆತ ಕೈಗಳು ಬೆಸೆದುಕೊಂಡಿದ್ದವು. ಊರನ್ನು ಅಡ್ಡಡ್ಡ ಸೀಳಿದವರಂತೆ ಕಂಡ ಕಂಡ ರಸ್ತೆ ತಿರುಗಿ, ಲೋಕನಿಂದಿತರ ಗಲ್ಲಿಗಳನ್ನು ಹಾದು ಊರ ಮತ್ತೊಂದು ಕೊನೆಯಲ್ಲಿದ್ದ ಆಲದ ಮರದ ಕೆಳಗೆ ಕುಳಿತರು. ಮುದುಕನೊಬ್ಬ ಕೊಳಕು ಪಾತ್ರೆಯಲ್ಲಿ ಬೆಂದ ಸಜ್ಜುಕ ಮಾರುತ್ತಿದ್ದ. ಒಣಗಿದೆಲೆಯಲ್ಲಿ ಅದನ್ನು ಹಾಕಿಸಿಕೊಂಡು ಸದ್ದಿಲ್ಲದೆ ತಿಂದರು. ಬೆಲ್ಲ ಕರಗಿದ ನೀರಿಗೆ ಕಾಮಕಸ್ತೂರಿಯ ಬೀಜ ಹಾಕಿ, ಅವು ಬೆಳ್ಳಗೆ ಅರಳಿದ ನಂತರ ಷರಬತ್ತು ಎಂದು ಹೆಸರಿಟ್ಟು ಪ್ಲಾಸ್ಟಿಕ್ಕಿನ ಲೋಟಕ್ಕೆ ಸುರುವಿಕೊಟ್ಟ ಮುದುಕ. ಅವಳು ಲೋಟ ಮುಟ್ಟಲಿಲ್ಲ. ಅವನೇ ಒಂದೊಂದಾಗಿ ಗುಟುಕು ಕುಡಿಸಿದ. ಅವಳು ಪರ್ಸು ತೆಗೆದು ಗರಿಗರಿ ನೋಟು ಕೊಟ್ಟಳು. ಅವನು ಅವುಗಳನ್ನು ಮುಟ್ಟಲಿಲ್ಲ. ಮುದುಕ ಚಿಲ್ಲರೆ ಎಣಿಸಿ ಕೊಟ್ಟ. ಅವಳು ಇಟ್ಟುಕೋ ಅಂದಳು.

'ನೀನು ವಿಮಾನ ಹತ್ತಿದ್ದೀಯಾ?' ಕೇಳಿದ.